**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಕ್ರಿ.ಮಿಸ್ ನಂಬರಃ 231/2019**

ಆರ್ ಡಬ್ಲ್ಯೂ 1

**ಸಾಕ್ಷಿದಾರರ ಹೆಸರು** : ಮುನಿರಹಮದ್ ಘನಿಬಂದ
**ತಂದೆಯ ಹೆಸರು** : ಇಬ್ರಾಹಿಂ ಸಾಬ್
**ವಯಸ್ಸು** : 50 ವರ್ಷ
**ಉದ್ಯೋಗ** : ಕೂಲಿ
**ವಾಸ** : ರಾಣೇಬೆನ್ನೂರು.

**ದಿನಾಂಕಃ 18-12-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಎದುರುದಾರನ ಪರ ವಕೀಲರಿಂದಃ**

1. ಈ ಪ್ರಕರಣದ ಅರ್ಜಿದಾರಳಾದ ನಜರುನ್ನೀಸಾ ಅವರು ನನಗೆ ಗೊತ್ತು. ಆಕೆ ಯಾವುದೇ ರೀತಿಯಿಂದ ನನಗೆ ಸಂಬಂಧಿಕಳಲ್ಲ. ಆಕೆಯನ್ನು ನಾನು ಮದುವೆಯಾಗಿಲ್ಲ.

2. 2 ನೇ ಎದುರುದಾರಳಾದ ಬಿಬಿ ಪಾತೀಮಾ ನನ್ನ ಹೆಂಡತಿ. ನನ್ನ ಹಾಗೂ ಬಿಬಿ ಪಾತೀಮಾಳ ಮದುವೆ 23 ವರ್ಷಗಳ ಹಿಂದೆ ಆಗಿದೆ. ನಮಗೆ 3 ಜನ ಮಕ್ಕಳು. ಅವರ ಹೆಸರು ಕ್ವಾಜಾ ಅಹಮದ್, ಖತೀರ್ ಅಹಮದ್ ಮತ್ತು ಜೈನಭಿ . ನನ್ನ ಮೂರುಾ ಜನ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ.ನನ್ನ ಹೆಂಡತಿ ಮಕ್ಕಳ ಜೀವನದ ಖರ್ಚು ವೆಚ್ಚಗಳನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ.

3. ತನಗೆ 3 ಜನ ಗಂಡಂದಿರು ಇರುತ್ತಾರೆ ಎಂದು ಅರ್ಜಿದಾರಳಾದ ನಜರುನ್ನೀಸಾ ನನಗೆ ಹೇಳಿದ್ದಳು. ಆಕೆಯ ಗಂಡಂದಿರ ಹೆಸರು ಮುನಿರ್ ಖಾಜಿ ಸಾಃ ಶಿವಮೊಗ್ಗ, ಫಜರುಲ್ಲಾ ಸೌಧಾಗರ್ ಮತ್ತು ಇನ್ನೊಬ್ಬನ ಹೆಸರು ಗೊತ್ತಿಲ್ಲ ಆದರೆ ಆತ ಮಾಸೂರು ಗ್ರಾಮದವನು. ಸದರಿ

ನಜರುನ್ನೀಸಾಳಿಗೆ ಆಕೆಯ ಮೊದಲ ಗಂಡನಿಂದ ಒಂದು ಹೆಣ್ಣು ಮಗು ಜನಿಸಿದ್ದು, ಆಕೆಯ ಹೆಸರು ಯಾಸ್ಮೀನ್. ಸದರಿ ಯಾಸ್ಮೀನ್ ಗೆ ಈಗ 40 ವರ್ಷ ವಯಸ್ಸು . ಆಕೆಗೂ ಸಹ 3 ಜನ ಮಕ್ಕಳಿದ್ದು, ಆಕೆ ಗೋವಾದಲ್ಲಿ ವಾಸಿಸುತ್ತಾಳೆ. ನಜರುನ್ನೀಸಾಳಿಗೆ ಆಕೆಯ 2 ನೇಯ ಗಂಡ ಫಜರುಲ್ಲಾಖಾನ್ ನಿಂದ 3 ಜನ ಮಕ್ಕಳು ಇರುತ್ತಾರೆ, ಅವರೆಂದರೆ ಫೈರೋಜ್ , ಸಲ್ಮಾನ್ ಮತ್ತು ಸಬರಿನ್ . ಅವರ ಪೈಕಿ ಸಬರಿನ್‌ಳ ಮದುವೆಯಾಗಿದ್ದು , ಆಕೆಗೂ ಸಹ 2 ಮಕ್ಕಳು ಇರುತ್ತಾರೆ. ಫೈರೋಜ್ ಜಿಮ್ ನಡೆಸುತ್ತಾನೆ ಹಾಗೂ ಸಲ್ಮಾನ್ ಟೈಲ್ಸ್ ಕೆಲಸ ಮಾಡುತ್ತಾನೆ. ಸದರಿ ಸಲ್ಮಾನ್ ಮತ್ತು ಫೈರೋಜ್ ಅವರು ನಜರುನ್ನೀಸಾಳೊಂದಿಗೆ ವಾಸಿಸುತ್ತಾರೆ.

4. ತನ್ನ ಎರಡನೇಯ ಗಂಡನಿಂದ ವಿಚ್ಛೇದನ ಪಡೆದಿದ್ದೇನೆ ಎಂದು ಅರ್ಜಿದಾರಳು ಸುಳ್ಳು ಹೇಳುತ್ತಾಳೆ. ನಾನು ರಾಣೇಬೆನ್ನೂರಿನ ಅಡವಿ ಆಂಜನೇಯ ಬಡಾವಣೆಯ ಒಂದು ಮನೆಯಲ್ಲಿ ಬಾಡಿಗೆಗೆ ಇದ್ದೆ. ಅದೇ ಪ್ರದೇಶದಲ್ಲಿ ಅರ್ಜಿದಾರಳು ಸಹ ವಾಸಿಸುತ್ತಿದ್ದಳು. ಆಕೆ ನನ್ನ ಕುಶಲೋಪರಿ ವಿಚಾರಿಸುತ್ತಿದ್ದಳು ಆದ್ದರಿಂದ ಪರಿಚಯವಾಗಿತ್ತು. ಆಕೆ ನನ್ನ ಮನೆಗೆ ಯಾವತ್ತೂ ಬಂದಿಲ್ಲ.

**(ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.